ದಿನಾಂಕ 12-01-2026 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** ಪ್ರತಿವಾದಿಗಳ ಪರ ಶ್ರೀ ಎ ಬಿ ಜೆ ವಕೀಲರಿಂದ.

ನನಗೆ ಓದಲು ಬರೆಯಲು ಬರುತ್ತದೆ. ಯಾವುದೇ ದಾಖಲೆಗೆ ಓದಿ ತಿಳಿದುಕೊಂಡು ಸಹಿ ಮಾಡುತ್ತೇನೆ ಎಂದರೆ ಸರಿ. ಯಾವುದೇ ವಿಷಯಕ್ಕೆ ನಿರ್ಧಾರ ತೆಗೆದುಕೊಳ್ಳುವಾಗ ಕುಟುಂಬಸ್ಥರೆಲ್ಲರೂ ಚರ್ಚಿಸಿ ನಿರ್ಧಾರ ತೆಗೆದುಕೊಳುತ್ತೇವೆ ಎಂದರೆ ಸರಿ. ಈ ದಾವೆಯನ್ನು ಹೂಡಲು ಮಾಹಿತಿಯನ್ನು ನಾನೇ ನೀಡಿದ್ದೇನೆ ಎನ್ನುತ್ತಾರೆ. ವಾದ ಪತ್ರ ಮತ್ತು ಸಾಕ್ಷ್ಯಪ್ರಮಾಣ ಪತ್ರವನ್ನು ಓದಿ ತಿಳಿದುಕೊಂಡಿದ್ದೇನೆ. ಸಾಕ್ಷಿಗೆ ನಿಪಿ 2 ಅನ್ನು ತೋರಿಸಲಾಗಿ ಅದರ ಪ್ರತಿ ಪುಟದಲ್ಲಿ ತಮ್ಮ ಸಹಿ ಇರುವುದಾಗಿ ನುಡಿಯುತ್ತಾರೆ. ನಿಪಿ 2 ಕ್ಕೆ ಸಹಿಯನ್ನು ಕ್ರಯ ಪತ್ರ ಮಾಡಿಕೊಡುವಾಗ ಹಳಿಯಾಳ ಉಪ-ನೋಂದಣಾಧಿಕಾರಿಗಳ ಕಚೇರಿಯಲ್ಲಿ ಮಾಡಿರುತ್ತೇನೆ. ಸದರಿ ಕ್ರಯ ಪತ್ರವನ್ನು ನನ್ನ ಅಕ್ಕನ ಗಂಡ ಅಂದರೆ ಪ್ರತಿವಾದಿಯ ಹೆಸರಿನಲ್ಲಿ ಮಾಡಿಕೊಟ್ಟಿದ್ದೆ. ನಿಪಿ 2 ರಲ್ಲಿ ಇರುವ ಭಾವಚಿತ್ರ ನನ್ನದೆ.

ದಾವಾ ಆಸ್ತಿ ತಮಗೆ ವಿದ್ಯಾಧರ ಬೆಳಗಲಿ ಎನ್ನುವವರು ದಾನ ಪತ್ರದ ಮೂಲಕ ಬರೆದುಕೊಟ್ಟಿದ್ದರು ಎಂದರೆ ಸರಿ. ಅದನ್ನು ನೀವು ಪ್ರತಿವಾದಿಯವರಿಗೆ ಮಾರಾಟ ಮಾಡಿದ್ದೀರಿ ಎಂದರೆ ಸರಿ. ದಾವಾ ಆಸ್ತಿಯನ್ನು ಮಾರಾಟ ಮಾಡುವ ಮುಖ್ಯ ವಿಚಾರ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ಒಂದು ಸ್ವತ್ತಿನ ಮಾಲೀಕರು ಅದನ್ನು ಅದನ್ನು ಮಾರಾಟಕ್ಕೆ ಇಟ್ಟಾಗ ಮಾತ್ರ ಖರೀದಿಸುವವರು ಆ ಸ್ವತ್ತಿನ ಬಗ್ಗೆ ವಿಚಾರಣೆ ಮಾಡುತ್ತಾರೆ ಎಂದರೆ ಸರಿ. ನಿಪಿ 2 ರಲ್ಲಿ ನೀವು ನಿಮ್ಮ ಮನೆತನದ ಅಡಚಣೆಗಾಗಿ ದಾವಾ ಆಸ್ತಿಯನ್ನು ಮಾರಾಟಕ್ಕೆ ತೆಗೆಯಲಾಗಿ ಎಂದು

ಬರೆಯಲಾಗಿದೆ ಎಂದರೆ ಸರಿ. ಅದೇ ರೀತಿ ಪ್ರತಿವಾದಿ ಖರೀದಿಗೆ ಪಡೆಯಲು ಬಯಸಿದ್ದರು ಎಂದು ಬರೆಯಲಾಗಿದೆ ಎಂದರೆ ಸರಿ. ಒಟ್ಟು 2 ಲಕ್ಷ 75 ಸಾವಿರ ರೂಪಾಯಿಗೆ ಮಾತುಕತೆಯಾಗಿ ನಿಪಿ 2 ರಂತೆ ಖರೀದಿ ಪತ್ರ ಆಗಿದೆ ಎಂದರೆ ಸರಿ. ನಿಪಿ 2 ರಲ್ಲಿ ಮುಂದುವರೆದು ಈ ಆಸ್ತಿಯ ರಕ್ಕಂ 2 ಲಕ್ಷ 75 ಸಾವಿರ ರೂಪಾಯಿಗಳನ್ನು ನಾನು ನಿಮ್ಮಿಂದ ಪಡೆದಿರುತ್ತೇನೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ಬರೆಯಲಾಗಿದೆ ಆದರೆ ಆ ಹಣವನ್ನು ಪ್ರತಿವಾದಿ ನನಗೆ ಕೊಟ್ಟಿಲ್ಲ ಎನ್ನುತ್ತಾರೆ. ನಿಪಿ 2 ಅನ್ನು ನೀವೆ ಬರೆದುಕೊಟ್ಟಿರುತ್ತೀರಿ ಎಂದರೆ ಸರಿ. ನಿಪಿ 2 ರಲ್ಲಿ ಏನು ಬರೆದಿದೆ ಎಂದು ಸಹಿ ಮಾಡುವ ಪೂರ್ವದಲ್ಲಿ ಓದಿ ತಿಳಿದುಕೊಂಡಿರುತ್ತೀರಿ ಎಂದರೆ ಸಾಕ್ಷಿ ನಾನು ಓದಿಲ್ಲ, ನಿನಗೆ ಆ ಮೇಲೆ ಹಣ ಕೊಡುತ್ತೇನೆ ಸಹಿ ಮಾಡು ಎಂದು ಅವಸರರವಸರದಲ್ಲಿ ಸಹಿ ಮಾಡಿಸಿಕೊಂಡಿರುತ್ತಾರೆ ಎನ್ನುತ್ತಾರೆ. ಮಾನ್ಯ ನ್ಯಾಯಾಲಯದ ಮುಂದೆ ಯಾವುದೇ ದಾಖಲೆಗಳನ್ನು ಓದಿ ತಿಳಿದುಕೊಂಡ ನಂತರ ಸಹಿ ಮಾಡುತ್ತೇನೆ ಎಂದು ನುಡಿದಿರುತ್ತೀರಿ ಎಂದರೆ ಸಾಕ್ಷಿ ಸಾಮಾನ್ಯವಾಗಿ ಓದುತ್ತೇನೆ ನಿಪಿ 2 ರ ದಾಖಲೆಗಳನ್ನು ಓದಿಲ್ಲ ಎನ್ನುತ್ತಾರೆ. ಸಾಮಾನ್ಯವಾಗಿ ಯಾವುದೇ ಒಂದು ವಸ್ತು ಖರೀದಿ ಹಣ ಕೊಟ್ಟ ನಂತರ ಖರೀದಿ ಪತ್ರ ಮಾಡಿಕೊಡುತ್ತಾರೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ದಾವಾ ಆಸ್ತಿಯನ್ನು ಪ್ರತಿವಾದಿಗೆ ಮಾರಾಟ ಮಾಡುವಾಗ ಖರೀದಿ ಹಣ 2 ಲಕ್ಷ 75 ಸಾವಿರ ರೂಪಾಯಿಗಳನ್ನು ಪಡೆದ ನಂತರ ನಿಪಿ 2 ರ ಕ್ರಯ ಪತ್ರ ಬರೆದುಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಆ ರೀತಿ ಬರೆದುಕೊಟ್ಟಿದ್ದರು ಸಹ ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ನಮ್ಮ ಯಜಮಾನ್ರು ವಕೀಲರ ವೃತ್ತಿಯಲ್ಲಿ ಇದ್ದಾರೆ ಎಂದರೆ ಸರಿ. ನಿಪಿ 2 ಅನ್ನು ನಿಮ್ಮ ಗಂಡನೊಂದಿಗೆ ಚರ್ಚಿಸಿದ ನಂತರ ಬರೆದುಕೊಟ್ಟಿರುತ್ತೀರಿ ಎಂದರೆ

ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ನಿಪಿ 2ರ ಕ್ರಯ ಪತ್ರ ಬರೆದುಕೊಟ್ಟಿರುವುದು ನನ್ನ ಗಂಡನಿಗೆ ಗೊತ್ತಿಲ್ಲ, ನನ್ನ ಅಕ್ಕ ಹೇಳಿದ್ದರಿಂದ ಬರೆದುಕೊಟ್ಟಿರುತ್ತೇನೆ ಎನ್ನುತ್ತಾರೆ. ನಿಪಿ 2 ರ ಕ್ರಯ ಪತ್ರವನ್ನು ನಿಮ್ಮ ಗಂಡನೊಂದಿಗೆ ಚರ್ಚಿಸಿ ಬರೆದುಕೊಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನಾನು ಅವರನ್ನು ಕೇಳಲಿಲ್ಲ ಎನ್ನುತ್ತಾರೆ. ನಿಪಿ 2 ರ ಕ್ರಯ ಪತ್ರ ಬರೆದುಕೊಡುವ ವಿಷಯ ನಿಮ್ಮ ಗಂಡನಿಗೆ ತಿಳಿದಿತ್ತು ಎಂದರೆ ಸರಿಯಲ್ಲ. ಎಲ್ಲಾ ಮುಖ್ಯ ವಿಚಾರಗಳಂತೆ ದಾವಾ ಸ್ವತ್ತನ್ನು ಮಾರಾಟ ಮಾಡುವ ವಿಷಯವನ್ನು ಮನೆಯಲ್ಲಿ ಚರ್ಚಿಸಿ ಕ್ರಯದ ಸಂಪೂರ್ಣ ಹಣ ಪಡೆದು ಪ್ರತಿವಾದಿಗೆ ಕ್ರಯ ಪತ್ರ ಬರೆದುಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಮಾರಾಟ ಮಾಡುವ ವಿಷಯವನ್ನು ಮನೆಯಲ್ಲಿ ಚರ್ಚಿಸಿದ್ದರೂ ಚರ್ಚಿಸಿರಲಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ 2 ರಲ್ಲಿ ಬರೆದ ವಿಷಯಗಳನ್ನು ಓದಿ ತಿಳಿದುಕೊಂಡಿದ್ದೇನೆ ಎಂದರೆ ಸರಿ. ನಿಪಿ 2 ರ ಪುಟ ಸಂಖ್ಯೆ 3 ರಲ್ಲಿ ಈ ಆಸ್ತಿಯ ಮೇಲೆ ಯಾವುದೇ ನ್ಯಾಯಾಲಯದಲ್ಲಿ ಕೇಸ್ ವಗೈರೆ ಇರುವುದಿಲ್ಲ ಎಂದು ಬರೆಯಲಾಗಿದೆ ಎಂದರೆ ಸರಿ. ಆದರೆ ಆ ಸಮಯದಲ್ಲಿ ದಾವೆ ಚಾಲ್ತಿಯಲ್ಲಿ ಇತ್ತು ಎನ್ನುತ್ತಾರೆ. ಆ ಸಮಯದಲ್ಲಿ ದಾವೆ ಚಾಲ್ತಿಯಲ್ಲಿ ಇದ್ದರೆ ಆ ವಿಷಯವನ್ನು ಕ್ರಯ ಪತ್ರದಲ್ಲಿ ನಮೂದಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಆ ಪ್ರಕರಣ ಆ ಸಮಯದಲ್ಲಿ ಮುಕ್ತಾಯವಾಗಿತ್ತು ಎನ್ನುತ್ತಾರೆ. ನಿಪಿ 2 ರ 4 ನೇ ಪುಟದಲಿ ನೀವು ಆತ್ಮ ಸಂತೋಷದಿಂದಲೂ ವ ಅಕ್ಕಲ ಹುಷಾರಿಯಿಂದಲೂ ಬರೆಸಿಕೊಟ್ಟ ಸ್ಥಿರಾಸ್ತಿ ವಾಸ್ತವದ ಮನೆ ವ ಅಡಿಸ್ಥಳ ಮತ್ತು ಖಾಲಿ ಜಾಗೆಯ ಖಂಡಿತ ಕ್ರಯ ದಸ್ತಾವೈಜು ಎಂದು ಬರೆಯಲಾಗಿದೆ ಎಂದರೆ ಸರಿ. ನಿಪಿ 2 ಅನ್ನು ಬರೆದುಕೊಡುವಾಗ ಸಾಕ್ಷಿದಾರರಾಗಿ ನೀಲಕಂಠ ಬೋಬಾಟಿ ಮತ್ತು ನೂಚಂಬ್ಲಿ

ಮತ್ತು ನೇರ್ವಗಿ ರವರು ಮತ್ತು ನನ್ನ ಅಕ್ಕ ಇದ್ದಳು ಎನ್ನುತ್ತಾರೆ. ಎಲ್ಲಾ ಸಾಕ್ಷಿದಾರರ ಸಮಕ್ಷಮ ನೀವು ಕ್ರಯ ಪತ್ರವನ್ನು ಬರೆದುಕೊಟ್ಟಿರುತ್ತೀರಿ ಎಂದರೆ ಸರಿ.

ನಿಮ್ಮ ಗಂಡನಿಗೆ ಹೃದಯ ಸಂಬಂಧಿ ಸಮ್ಯಸೆ ಆಗಿತ್ತು ಎಂದರೆ ಸರಿ. 2003-04 ರಲ್ಲಿ ನನ್ನ ಗಂಡನಿಗೆ ಹೃದಯಘಾತ ಆಗಿತ್ತು ಎನ್ನುತ್ತಾರೆ. ಅವರಿಗೆ 2014 ರಲ್ಲಿ ಹೃದಯ ಶ್ರಸ್ತಚಿಕಿತ್ಸೆ ಆಗಿದೆ. 2004 ರಿಂದ 2014 ರ ವರೆಗೆ ಅವರು ಹೃದಯ ಸಂಬಂಧಿಸಿ ಚಿಕಿತ್ಸೆಯಲ್ಲಿ ಇದ್ದರು ಎನ್ನುತ್ತಾರೆ. ಆಗ ನೀವು ಚಿಕಿತ್ಸೆಗಾಗಿ ಹೆಚ್ಚು ಹಣ ವ್ಯಯ ಮಾಡಿದ್ದೀರಿ ಎಂದರೆ ಸರಿ. ನಿಮ್ಮ ಗಂಡನ ಚಿಕಿತ್ಸೆಗಾಗಿ ಹಣದ ಅವಶ್ಯಕತೆ ಇರುವುದರಿಂದ ದಾವಾ ಸ್ವತ್ತನ್ನು ಮಾರಾಟಕ್ಕೆ ಇಟ್ಟಿದ್ದೀರಿ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಮಗೆ ಚಿಕಿತ್ಸೆಗಾಗಿ ಹಣದ ಅವಶ್ಯಕತೆ ಇದ್ದರೂ ಸಹ ದಾವೆಗೆ ಅನುಕೂಲ ಆಗಲೆಂದು ಅವಶ್ಯಕತೆ ಇರಲಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಪ್ರತಿವಾದಿ ಹಾಗೂ ಅವರ ಸಹೋದರ ಅನೀಲ್ ರವರು ಒಂದೇ ತಾಯಿಯ ಮಕ್ಕಳು ಎಂದರೆ ಸರಿ. ಅವರು ಆರ್ಥಿಕವಾಗಿ ಸಭಲರಾಗಿದ್ದಾರೆ ಎಂದರೆ ಸಾಕ್ಷಿ ಮೊದಲು ಚೆನ್ನಾಗಿದ್ದರು, ಆ ನಂತರ ಸಭಲರಾಗಿರಲಿಲ್ಲ ಎನ್ನುತ್ತಾರೆ. ಪ್ರತಿವಾದಿ ಹಾಗೂ ಅವರ ಸಹೋದರ ಅನೀಲ್ ರವರು ಅನ್ಯೋನ್ಯವಾಗಿ ಇದ್ದಾರೆ ಎಂದರೆ ಮೊದಲು ಚೆನ್ನಾಗಿದ್ದರು, ಆ ನಂತರ ಚೆನ್ನಾಗಿ ಇರಲಿಲ್ಲ ಎನ್ನುತ್ತಾರೆ. ಪ್ರತಿವಾದಿಯು ಕೆ ಎಸ್ ಆರ್ ಟಿ ಸಿ ಯಲ್ಲಿ ಸೇವೆ ಸಲ್ಲಿಸುತ್ತಿದ್ದರು ಎಂದರೆ ಸರಿ. ಅವರು ಸಹೋದರ ಸಹ ಕೆ ಎಸ್ ಆರ್ ಟಿ ಸಿ ಯಲ್ಲಿ ಸೇವೆ ಸಲ್ಲಿಸುತ್ತಿದ್ದರು ಎಂದರೆ ಸರಿ. ಅವರವರ ಕುಟುಂಬದಲ್ಲಿ ತಮ್ಮ ತಮ್ಮ ಉದ್ಯೋಗದಿಂದಾಗಿ ಸಭಲರಾಗಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ ಹಾಗೂ ಅವರ ಸಹೋದರ ಅನೀಲ್ ರವರಿಗೆ ಸರ್ಕಾರದಿಂದ ವೇತನ ಬರುತ್ತಿರಲಿಲ್ಲವೆ ಎಂದರೆ ಸಾಕ್ಷಿ ನನಗೆ ಅನೀಲ್ ರವಿಚಾರ

ಗೊತ್ತಿಲ್ಲ, ಪ್ರತಿವಾದಿ ರವರಿಗೆ ವೇತನ ಬರುತ್ತಿರಲಿಲ್ಲ ಎಂದು ನನ್ನ ಅಕ್ಕ ನನಗೆ ಹೇಳುತ್ತಿದ್ದಳು ಎನ್ನುತ್ತಾರೆ. ವೇತನ ಬರದಿದ್ದರೆ ಯಾರು ಕೆಲಸಕ್ಕೆ ಹೋಗುವುದಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಹೇಳಲಾಗುವುದಿಲ್ಲ ಎನ್ನುತ್ತಾರೆ. ಪ್ರತಿವಾದಿ ನವಂಬರ್ 2025 ರ ವರೆಗೆ ವೇತನ ಪಡೆದು ನಿವೃತ್ತಿ ಹೊಂದಿದ್ದಾರೆ ಎಂದರೆ ಸಾಕ್ಷಿ ಈಗಿನ ವಿಚಾರ ನನಗೆ ಗೊತ್ತಿಲ್ಲ ಮೊದಲು ನನ್ನ ಅಕ್ಕ ಅವಳ ಗಂಡನಿಗೆ ಅಂದರೆ ಪ್ರತಿವಾದಿಗೆ ವೇತನ ಬರುತ್ತಿರಲಿಲ್ಲ ಎಂದು ಹೇಳುತ್ತಿದ್ದಳು ಎನ್ನುತ್ತಾರೆ. ಪ್ರತಿವಾದಿಯ ರವರ ಕುಟುಂಬದ ಬಗ್ಗೆ ನಿಮಗೆ ಯಾವತ್ತು ಮಾಹಿತಿ ಇಲ್ಲ, ಆದರೂ ಸಹ ದಾವೆಗೆ ಅನುಕೂಲ ಆಗಲು ಈಗಿನ ಮಾಹಿತಿ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಅನೀಲ್ ರವರು ಕುಟುಂಬ ಮತ್ತು ಆರ್ಥಿಕ ಸ್ಥಿತಿಯ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಪ್ರತಿವಾದಿ ಹಾಗೂ ಅವರ ಸಹೋದರ ಅನೀಲ್ ರವರು ಜೀವಂತ ಇರುವವರೆಗೂ ಅನ್ಯೊನ್ಯವಾಗಿ ಇದ್ದರು ಎಂದರೆ ಸಾಕ್ಷಿ ಅನ್ಯೋನ್ಯವಾಗಿ ಇರಲಿಲ್ಲ ಎನ್ನುತ್ತಾರೆ. ಪ್ರತಿವಾದಿ ಹಾಗೂ ಅವರ ಸಹೋದರ ಅನೀಲ್ ರವರ ಕುಟುಂಬದ ಹಿನ್ನೆಲೆಯ ಬಗ್ಗೆ ನಿಮಗೆ ಸಂಪೂರ್ಣ ಮಾಹಿತಿ ಇದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪ್ರತಿವಾದಿ ಹಾಗೂ ಅವರ ಸಹೋದರ ಅನೀಲ್ ರವರು ಮೊದಲಿಂದಲೂ ಅನ್ಯೋನ್ಯವಾಗಿದ್ದರು ಅನೀಲ್ ರವರ ಮರಣಾನಂತರ ಅವರ ಮಕ್ಕಳು ಸಹ ಪ್ರತಿವಾದಿಯೆಂದಿಗೆ ಅನ್ಯೋನ್ಯವಾಗಿ ಇದ್ದಾರೆ ಎಂದರೆ ಸರಿಯಲ್ಲ. ಅನೀಲ್ ರವರ ಮಗನ ಹೆಸರು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅನೀಲ್ ರವರ ಮಗ ಹಾಗೂ ಮಗಳು ರಾಮಪುರದಲ್ಲಿ, ತಾಃ ಜಮುಖಂಡಿಯಲ್ಲಿ ಇದ್ದಾರೆ ಎನ್ನುತ್ತಾರೆ, ಅವರು ಏನು ಉದ್ಯೋಗ ಮಾಡುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಅನೀಲ್ ರವರ ಕುಟುಂಬದ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇರದಿದ್ದರೂ ಸಹ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಅನೀಲ್ ರವರ ಮಗ ಇವತ್ತಿಗೂ ಪ್ರತಿವಾದಿಯ ಮನೆಗೆ ಹೋಗಿ ಬಂದು ಮಾಡುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಮೊದಲಿನಿಂದಲೂ ಪ್ರತಿವಾದಿ ಮತ್ತು ಅವರ ಸಹೋದರ ಅನೀಲ್ ರವರ ಬಾಂಧವ್ಯ ಚೆನ್ನಾಗಿತ್ತು, ಆ ವಿಷಯವನ್ನು ನೀವು ತಿಳಿದುಕೊಂಡಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ನೀವು ಹಾಜರುಪಡಿಸಿದ ದಾಖಲೆಗಳ ಬಗ್ಗೆ ಮಾಹಿತಿ ಇದೆಯೇ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ಯಾವ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ವಕೀಲರು ಮೂಲಕ ಕೇಳಿ ತಿಳಿದುಕೊಳ್ಳಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ನಾನು ಅವರಿಂದ ಈಗ ಕೇಳಿಲ್ಲ ಎನ್ನುತ್ತಾರೆ. ಈ ದಾವೆಯಲ್ಲಿ ನನ್ನ ವಕೀಲರಾಗಿ ಬಸಣ್ಣ ಪಟ್ಟೇಕರ ಮತ್ತು ಸಂತೋಷ ಹಬ್ಬು ವಕೀಲರು ಇರುತ್ತಾರೆ ಎನ್ನುತ್ತಾರೆ. ಯಾವ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ಈ ದಿನ ಮಾಹಿತಿ ಪಡೆದಿರುತ್ತೀರಾ ಎಂದರೆ ಸಾಕ್ಷಿ ನಾನು ನೋಡಿಲ್ಲ ಎನ್ನುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.